# ಇತರ ಪ್ರಮುಖ ನಿಯಮಗಳು ಮತ್ತು ಷರತ್ತುಗಳು (MITC)

{@PRAPPLName} ಮತ್ತು ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್ (MOHFL) ನಡುವೆ ಸಮ್ಮತಿಸಲಾದ ವಸತಿ / ವಸತಿಯೇತರ ಸಾಲದ (KFS ಹೊರತುಪಡಿಸಿ) ಇತರ ಪ್ರಮುಖ ಕರಾರುಗಳು ಮತ್ತು ಷರತ್ತುಗಳು ಈ ಕೆಳಗಿನಂತಿವೆ: Motilal Oswal Home Finance Limited (MOHFL) are as under:

**ಸಾಲದ ವಿವರಗಳು**

| ಕ್ರ. ಸಂ. | ವಿವರಗಳು | ವಿವರಣೆ |
|---|---|---|
| 1 | ಅರ್ಜಿ / ಲೀಡ್ ID / UCID | |
| 2 | ಸಾಲ ಮಂಜೂರಾದ ಮೊತ್ತ ಮತ್ತು ಸಾಲ ಒಪ್ಪಂದದ ದಿನಾಂಕ | ರೂ<br>ದಿನಾಂಕ : |
| 3 | ಕಂತು ಮೊತ್ತ (EMI) ಮತ್ತು EMI ಗಳ ಸಂಖ್ಯೆ | ರೂ. |
| 4 | ಬಡ್ಡಿ ದರದ ಮರುನಿಗದಿ ದಿನಾಂಕ | ಬಡ್ಡಿದರ ಮರುನಿಗದಿ ಪರಿಷ್ಕರಣೆ ಚಕ್ರವು ಇಂಗ್ಲಿಷ್ ಕ್ಯಾಲೆಂಡರ್ ವರ್ಷದ ತ್ರೈಮಾಸಿಕವಾಗಿದ್ದು, ಪ್ರತಿ ವರ್ಷದ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ ಮೊದಲ ದಿನದಿಂದ ಪ್ರಾರಂಭವಾಗುತ್ತದೆ. |
| 5 | ಸಾಲದ ಉದ್ದೇಶ / ಸಾಲದ ವಿಧ | |
| 6 | ಸಾಲದ ಅಂತಿಮ ಬಳಕೆ | |
| 7 | ಕಂತಿನ ವಿಧ PEMI, EMI | ಆವರ್ತನ ಮಾಸಿಕ (PEMI - ಸಾಲದ ಪೂರ್ಣ ವಿತರಣೆಯ ಮೊದಲು ಮತ್ತು EMI - ನಂತರ) |

| | | |
|---|---|---|
| 8(i) | ಸಾಲಕ್ಕೆ ಭದ್ರತೆ / ಮೇಲಾಧಾರ | |
| (ii) | ಇತರ ಭದ್ರತಾ (ಯಾವುದಾದರೂ ಇದ್ದರೆ) | |
| 9 | ಬಡ್ಡಿದರದಲ್ಲಿ ಆಗುವ ಬದಲಾವಣೆಗಳ ಸಂವಹನ ವಿಧಾನಗಳು | ಇಮೇಲ್ / SMS / ವಾಟ್ಸಾಪ್ / ನೋಂದಾಯಿತ ಫೋನ್ / ಮೊಬೈಲ್ ಸಂಖ್ಯೆಗೆ ಕರೆ / MOHFL ಜಾಲತಾಣದಲ್ಲಿ ಪರಿಷ್ಕರಿಸಿ ಹಾಕುವುದು / ಇತರ ಸಂವಹನ ಮೂಲದ ಮೂಲಕ. |
| 10 | ಖಾತರಿದಾರರ ವಿವರಗಳು | |
| 11 | ಕಂತು ಮತ್ತು ಬಡ್ಡಿ ಪಾವತಿಯ ಅಂತಿಮ ದಿನಾಂಕ | ಸಾಲದಾರರು PEMI/EMI ಅನ್ನು 7ನೇ ತಾರೀಖಿನಂದು ಅಥವಾ ಅದಕ್ಕೂ ಮೊದಲು (PEMI/EMI ನ ಅಂತಿಮ ದಿನಾಂಕ) ಅಥವಾ ವೇಳಾಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಪಾವತಿಸಬೇಕು. PEMI/EMI ನ ಗಡುವು ದಿನಾಂಕದ ಆವರ್ತನವು ಮಾಸಿಕವಾಗಿರುತ್ತದೆ. ವಿತರಣಾ ಪಾವತಿ ಹಸ್ತಾಂತರವು ತಿಂಗಳ 01 - 06 ನೇ ತಾರೀಖಿನ ನಡುವೆ ಇದ್ದರೆ, ಮಧ್ಯಂತರ ದಿನಗಳ ಪೂರ್ವ-EMI ಬಡ್ಡಿ ಮತ್ತು ಮೊದಲ EMI ಅನ್ನು ನಂತರದ ತಿಂಗಳ 7ನೇ ತಾರೀಖಿನಂದು ಅಥವಾ ವೇಳಾಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಪಾವತಿಸಲಾಗುತ್ತದೆ. |

**ಸಾಲ ಮತ್ತು ಬಡ್ಡಿಯ ಮರುಪಾವತಿ :** ಸಾಲದ ಮರುಪಾವತಿಯನ್ನು ಸಾಲ ಒಪ್ಪಂದದಲ್ಲಿ ವಿವರಿಸಿರುವ ನಿಬಂಧನೆಗಳ ವಿಧ ಸಾಲದ ಸಂಪೂರ್ಣ ಅವಧಿಯಲ್ಲಿ PEMI/EMI ಮೂಲಕ ಮಾಡಬೇಕು. ದಯವಿಟ್ಟು KFS ನೊಂದಿಗೆ ಲಗತ್ತಿಸಲಾದ ಋಣಮುಕ್ತತೆ ವೇಳಾಪಟ್ಟಿಯನ್ನು ನೋಡಿ.

**ಅಪಾಯದ ಶ್ರೇಣೀಕರಣದ ವಿಧಾನ:** ರಿಸ್ಕ್ ಪ್ರೀಮಿಯಂ ಅನ್ನು ಪ್ರತಿ ಪ್ರಕರಣದ ಆಧಾರದ ಮೇಲೆ MOHFL ನಿರ್ಧರಿಸಿದ ವಿಧವಾಗಿ ನಿರ್ಧರಿಸಲಾಗುತ್ತದೆ. ಅಪಾಯವನ್ನು ಶ್ರೇಣೀಕರಿಸುವ ವಿಧಾನವು ಸಾಲದ ಸ್ವರೂಪ, ಸಾಲಗಾರನ ಸಾಲ ಯೋಗ್ಯತೆ, ಭದ್ರತೆಯ ಸ್ವರೂಪ, ಉತ್ಪನ್ನದ ಸ್ವರೂಪ, ಹಣಕಾಸು ಒದಗಿಸಲಾಗುತ್ತಿರುವ ಆಸ್ತಿಯ ವಿಧ, ಸಾಲಗಾರನ ಪ್ರೊಫೈಲ್, ಮರುಪಾವತಿ ಸಾಮರ್ಥ್ಯ, ಸಾಲಗಾರನ ಇತರ ಹಣಕಾಸು ಬದ್ಧತೆಗಳು, ಹಿಂದಿನ ಮರುಪಾವತಿ, ಸಾಲದ ಅವಧಿ, ಸಾಲಗಾರನ ಭೌಗೋಳಿಕತೆ (ಸ್ಥಳ), ಮೂಲ ಆಸ್ತಿಯಿಂದ ನಿರೂಪಿತವಾದ ಸಾಲದ ಅಂತಿಮ ಬಳಕೆ ಮುಂತಾದ ಅಂಶಗಳನ್ನು ಆಧರಿಸಿವೆ. ಅಂತಹ ಮಾಹಿತಿಯನ್ನು ಸಾಲಗಾರರು ನೀಡಿದ ಮಾಹಿತಿ, ಕ್ರೆಡಿಟ್ ಬ್ಯೂರೋ ಮತ್ತು MOHFL ಅಧಿಕಾರಿಗಳ ಕ್ಷೇತ್ರ ಪರಿಶೀಲನೆಯ ಆಧಾರದ ಮೇಲೆ ಸಂಗ್ರಹಿಸಲಾಗುತ್ತದೆ. ಬಡ್ಡಿದರ ಮತ್ತು ಇತರ ಶುಲ್ಕಗಳನ್ನು ನಿರ್ಧರಿಸುವಾಗ, ಮಾರುಕಟ್ಟೆಯಲ್ಲಿ ಪ್ರತಿಸ್ಪರ್ಧಿಗಳು ನೀಡುವ ದರವನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

**ಸಾಲದ ಕೋಡ್ :**
**ಸಾಲಗಾರನ ಹೆಸರು:**

**MITC**

**ಆಸ್ತಿ / ಸಾಲಗಾರನ ವಿಮೆ :** ನಿಮ್ಮ ರೂ. {@sanctionAmount} ಸಾಲವನ್ನು {@LoanTenure} ತಿಂಗಳ ಅವಧಿಗೆ ಮಂಜೂರು ಮಾಡಲಾಗಿದೆ. ನೀವು ಆಯ್ಕೆ ಮಾಡಿದ ವಿಮಾ ಪಾಲಿಸಿ/ಗಳ ವಿವರಗಳು ಕೆಳಕಂಡಂತಿವೆ

1. ಶ್ರೀ/ಶ್ರೀಮತಿಗೆ {@LFCustomerName} ತಿಂಗಳುಗಳವರೆಗೆ {@LFPolicyTenure} ರೂ. {@LFInsuranceSum} ಗಳ ವಿಮಾ ಮೊತ್ತದೊಂದಿಗೆ ಜೀವ ವಿಮೆ.
2. {@PropertyAddress} ತಿಂಗಳುಗಳವರೆಗೆ {@ProPolicyTenure} ರೂ. {@ProInsuranceSum} ಗಳ ವಿಮಾ ಮೊತ್ತದೊಂದಿಗೆ ಇರುವ ಆಸ್ತಿಗೆ ಆಸ್ತಿ ವಿಮೆ.

3. ರೂ.{@HealthInsuranceSum} ಗಳ ವಿಮಾ ಮೊತ್ತದ ಆರೋಗ್ಯ {@HealthCustomerName} ವಿಮೆ

ವಿಮಾ ಪಾಲಿಸಿಯನ್ನು ನೀಡುವುದು ವಿಮೆದಾತರ ಸ್ವಂತ ವಿವೇಚನೆಗೆ ಬಿಟ್ಟಿದ್ದಾಗಿದೆ. ವಿಮೆದಾತರು ವಿಮೆ ಪಾಲಿಸಿಯನ್ನು ನೀಡಿದ ನಂತರ ವಿಮಾ ಕವರೇಜ್ ಜಾರಿಗೆ ಬರುತ್ತದೆ, ಇದು ವಿತರಣಾ ಪಾವತಿಯ ಕ್ಲಿಯರೆನ್ಸ್‌ಗೆ ಒಳಪಟ್ಟಿರುತ್ತದೆ. ವಿಮೆ ಪಾಲಿಸಿಯಲ್ಲಿ ಒದಗಿಸಲಾದ ಕಡಿತ ವೇಳಾಪಟ್ಟಿಯಲ್ಲಿ ವಿವರಿಸಿದಂತೆ ಸಾಲದಾರರು ಆಯ್ಕೆ ಮಾಡಿದ ಅವಧಿಗೆ ಮಾತ್ರ ವಿಮಾ ಮೊತ್ತ ಮತ್ತು ಸಂಬಂಧಿತ ವಿಮಾ ಪ್ರಯೋಜನಗಳು ಅನ್ವಯಿಸುತ್ತವೆ.

ವಿಮೆ ಕ್ಲೇಮ್ನ ಸಂದರ್ಭದಲ್ಲಿ, ವಿಮೆ ಕವರೇಜ್ ಮೊತ್ತ/ಸಾಲದ ಅವಧಿ ಸಾಲದ ಮೊತ್ತ/ಅವಧಿಗಿಂತ ಕಡಿಮೆಯಿದ್ದರೆ ಬಾಕಿ ಇರುವ ಸಾಲದ ಬಾಕಿ ಮತ್ತು ಕ್ಲೇಮ್ ಮೊತ್ತವು ಭಿನ್ನವಾಗಿರಬಹುದು ಎಂಬುದನ್ನು ಸಾಲದಾರರು ಮಂಜೂರಾತಿ ಪತ್ರವನ್ನು ಸ್ವೀಕರಿಸುವ ಮೂಲಕ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸಮ್ಮತಿಸುತ್ತಾರೆ. ವಿಮೆ ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಿದ ವಿಮೆ ಕವರೇಜ್ ಮೊತ್ತ ಅಥವಾ ಅವಧಿಯವರೆಗೆ ಮಾತ್ರ ವಿಮೆ ಕ್ಲೇಮ್ ಅನ್ನು ಮಾಡಬಹುದುದಾಗಿದೆ.

| **ಸಾಲ ವಿತರಣೆಗೆ ಷರತ್ತುಗಳು:** | |
|---|---|
| 1 | ಮಂಜೂರಾತಿ ಪತ್ರ / ಸಾಲ ಒಪ್ಪಂದದಲ್ಲಿ MOHFL ಉಲ್ಲೇಖಿಸಿರುವ ಎಲ್ಲಾ ಸಂಬಂಧಿತ ದಾಖಲೆಗಳನ್ನು ಸಲ್ಲಿಸುವುದು. |
| 2 | ಆಸ್ತಿಯ ಕಾನೂನು ಮತ್ತು ತಾಂತ್ರಿಕ ಮೌಲ್ಯಮಾಪನವನ್ನು ಅನುಮತಿಸುವುದು |
| 3 | ಮಂಜೂರಾತಿ/ವಿತರಣಾ ಪತ್ರದಲ್ಲಿ ನಿರ್ದಿಷ್ಟಪಡಿಸಿದಂತೆ ಸ್ವಂತ ಕೊಡುಗೆಯನ್ನು (ಫ್ಲ್ಯಾಟ್ನ ಒಟ್ಟು ವೆಚ್ಚದಿಂದ ಸಾಲದ ಮೊತ್ತವನ್ನು ಕಳೆದು) ಪಾವತಿಸುವುದು. |
| 4 | ಸಾಲದ ಸಮರ್ಪಕ ಬಳಕೆಯ ಪುರಾವೆಗಳನ್ನು ಒದಗಿಸುವುದು. |
| 5 | ನಿರ್ಮಾಣದ ಪ್ರಗತಿ / ವಿಳಂಬ, ಆಸ್ತಿಗೆ ಯಾವುದೇ ಪ್ರಮುಖ ಹಾನಿ, ಉದ್ಯೋಗ / ಸಂಪರ್ಕ ವಿವರಗಳಲ್ಲಿನ ಬದಲಾವಣೆ, ಆಸ್ತಿಗೆ ಸಂಬಂಧಿಸಿದ ತೆರಿಗೆಗಳನ್ನು ಪಾವತಿಸದಿರುವುದು ಇತ್ಯಾದಿ ವಿವರಗಳನ್ನೂ ಒಳಗೊಂಡಂತೆ ಮಾಹಿತಿಯನ್ನು MOHFLಗೆ ನಿಯಮಿತವಾಗಿ ಒದಗಿಸಲು ವಾಗ್ದಾನ ನೀಡುವುದು. |
| 6 | ಅನುಮೋದಿತ ಯೋಜನೆಗಳ ವಿಧವೇ ನಿರ್ಮಾಣವನ್ನು ಕೈಗೊಳ್ಳಲಾಗುತ್ತಿದೆ ಎಂದು ಖಚಿತಪಡಿಸುವುದು. |
| 7 | ಡೆವಲಪರ್ (ಆಸ್ತಿಯ ಮರುಮಾರಾಟದ ಖರೀದಿಯ ಸಂದರ್ಭದಲ್ಲಿ ಮಾರಾಟಗಾರು) ಯೋಜನೆಗೆ ಅಗತ್ಯವಾದ ಅನುಮೋದನೆಗಳನ್ನು ಪಡೆದುಕೊಂಡಿದ್ದಾರೆ ಎಂದು ಸ್ವತಃ ತೃಪ್ತಿಪಡಿಸಿಕೊಳ್ಳುವುದು. |
| 8 | ಆಸ್ತಿಗೆ ಅಗತ್ಯವಿರುವ ಎಲ್ಲಾ ಅನುಮೋದನೆಗಳನ್ನು ಪಡೆಯಲಾಗಿದೆ ಎನ್ನುವುದನ್ನು ಮತ್ತು ಆಸ್ತಿಯನ್ನು ಮರುಮಾರಾಟದಲ್ಲಿ ಖರೀದಿಸುತ್ತಿದ್ದರೆ ಆಸ್ತಿಯು ಮಾರಾಟಗಾರರ ಬಳಿ ಲಭ್ಯವಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.. |

**ಸಾಲದ ಕೋಡ್:**
**ಅರ್ಜಿದಾರರ ಹೆಸರು:**

**MITC**

**ಬಾಕಿ ವಸೂಲಿಯ ಕಾರ್ಯವಿಧಾನವು ಈ ಕೆಳಗಿನಂತಿದೆ:** ಒಪ್ಪಂದದಲ್ಲಿ ಉಲ್ಲೇಖಿಸಿರುವಂತೆ ("ಡೀಫಾಲ್ಟ್ ಘಟನೆ") ಯಾವುದೇ ಡೀಫಾಲ್ಟ್ ಘಟನೆ ಸಂಭವಿಸಿದಲ್ಲಿ, ಸಾಲದಾರರು MOHFL ಗೆ ನೀಡಬೇಕಾದ ಎಲ್ಲಾ ಬಾಕಿ ಮೊತ್ತಗಳನ್ನು ತಕ್ಷಣವೇ ಪಾವತಿಸಲಾಗುವುದು. ವಿಳಂಬ ಪಾವತಿಗೆ ವಿಧಿಸಲಾದ ದಂಡ ಶುಲ್ಕಗಳು, ಅನ್ವಯವಾಗುವ ಕಾನೂನು ಪರಿಹಾರಗಳಿಗೆ ಅನುಗುಣವಾಗಿ ಭದ್ರತೆಯನ್ನು ಜಾರಿಗೊಳಿಸುವ ಮೂಲಕ ಹೆಚ್ಚುವರಿ ಬಾಕಿಗಳ ಮರುಪಡೆಯುವಿಕೆ ಸೇರಿದಂತೆ ಒಪ್ಪಂದದ ಅಡಿಯಲ್ಲಿ ತನ್ನ ಹಕ್ಕುಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವ ಹಕ್ಕನ್ನು MOHFL ಕಾಯ್ದಿರಿಸಿದೆ. ಯಾವುದೇ ಕಾನೂನು ಕ್ರಮ ಕೈಗೊಳ್ಳುವ ಮೊದಲು, MOHFL ಕಂಪನಿಯ ದಾಖಲೆಯಲ್ಲಿ ಲಭ್ಯವಿರುವ ವಿಳಾಸದಲ್ಲಿ ಸಾಲದಾರರಿಗೆ ನೋಟೀಸ್ ನೀಡುತ್ತದೆ. ಪ್ರತಿ ಪ್ರಕರಣದ ಸಂದರ್ಭಗಳನ್ನು ಅವಲಂಬಿಸಿ ನಿಜವಾದ ಕಾರ್ಯವಿಧಾನವನ್ನು MOHFL ನಿರ್ಧರಿಸುತ್ತದೆ.

**ವಾರ್ಷಿಕ ಪಾವತಿಗೆ ಬಾಕಿ ಇರುವ ವಿವರಣಾ ಪತ್ರವನ್ನು ನೀಡುವ ದಿನಾಂಕ: :** ವಿವರಣಾ ಪತ್ರವನ್ನು ತ್ರೈಮಾಸಿಕ ಆಧಾರದ ಮೇಲೆ ನೀಡಲಾಗುವುದು.

**ಗ್ರಾಹಕ ಸೇವೆಗಳು:**

| | |
|---|---|
| 1. | ಕೇಂದ್ರೀಕೃತ ಸಹಾಯವಾಣಿ ಕೆಲಸದ ಸಮಯಗಳು - (1) ಸೋಮವಾರದಿಂದ ಶುಕ್ರವಾರ – ಬೆಳಿಗ್ಗೆ 09:30 ರಿಂದ ಸಂಜೆ 6:00 ಮತ್ತು (2) ಶನಿವಾರ - ಬೆಳಿಗ್ಗೆ 09:30 ರಿಂದ ಸಂಜೆ 6:00 ರವರೆಗೆ (ತಿಂಗಳ ಮೊದಲ ಶನಿವಾರ ರಜಾದಿನವಾಗಿರುತ್ತದೆ) |
| | ಶಾಖೆಗಳಲ್ಲಿ ಗ್ರಾಹಕರು ಭೇಟಿ ನೀಡಬಹುದಾದ ಸಮಯ - (1) ಸೋಮವಾರದಿಂದ ಶುಕ್ರವಾರ - ಬೆಳಿಗ್ಗೆ -10:00 ರಿಂದ ಬೆಳಿಗ್ಗೆ 11:00 ಮತ್ತು ಸಂಜೆ - ಸಂಜೆ 5:00 ರಿಂದ 6:00, (2) ಶನಿವಾರ - ಬೆಳಿಗ್ಗೆ - ಬೆಳಿಗ್ಗೆ 10:00 ರಿಂದ 11:00 ರವರೆಗೆ (ತಿಂಗಳ ಮೊದಲ ಶನಿವಾರ ರಜಾದಿನವಾಗಿರುತ್ತದೆ) |
| 2. | ಗ್ರಾಹಕ ಸೇವೆಗಾಗಿ ಸಂಪರ್ಕಿಸಬೇಕಾದ ವ್ಯಕ್ತಿಯ ವಿವರ: ನಿಮ್ಮ ಸಾಲದ ಖಾತೆಗೆ ಸಂಬಂಧಿಸಿದ ಪ್ರಶ್ನೆಗಳಿದ್ದಲ್ಲಿ, ಗ್ರಾಹಕರ ಸೇವಾ ಡೆಸ್ಕ್- @ 8291889898 ಗೆ ಕರೆ ಮಾಡಬಹುದು, ಇಮೇಲ್ @ hfquery@motilaloswal.com / ಶಾಖೆಯ ಮಾರಾಟ ವ್ಯವಸ್ಥಾಪಕರನ್ನು ನೀವು ಸಂಪರ್ಕಿಸಬಹುದು. |

**ಸಾಲದ ಕೋಡ್:**
**ಅರ್ಜಿದಾರರ ಹೆಸರು:**

**MITC**

| **ಈ ಕೆಳಗಿನವುಗಳನ್ನು ಪಡೆಯುವ ಕಾರ್ಯವಿಧಾನ, ಅವುಗಳ ಕಾಲಾವಧಿಯನ್ನೂ ಒಳಗೊಂಡು** | | |
|---|---|---|
| 1 | ಸಾಲದ ಖಾತೆಯ ವಿವರಣಾ ಪತ್ರ | ನೇರ ಡೌನ್ಲೋಡ್ಗಾಗಿ ಸುರಕ್ಷಿತ ಬಿಟ್-ಲೈ ಲಿಂಕ್ನೊಂದಿಗೆ ತ್ರೈಮಾಸಿಕ ಹೇಳಿಕೆಯನ್ನು SMS ಮೂಲಕ ಕಳುಹಿಸಲಾಗುತ್ತದೆ. ಗ್ರಾಹಕರು 'MOHF ಪರಿವಾರ್ ಮೊಬೈಲ್ ಆ್ಯಪ್' ಅನ್ನು ಪ್ರವೇಶಿಸಬಹುದು ಅಥವಾ ಸಮೀಪದ MOHFL ಶಾಖೆಗೆ ಭೇಟಿ ನೀಡಿ ರೂ. 2000/- ಮತ್ತು ಅನ್ವಯವಾಗುವ ತೆರಿಗೆಗಳನ್ನು ಪಾವತಿಸುವ ಮೂಲಕ ಸ್ಟೇಟ್ಮೆಂಟ್ ಅನ್ನು ವಿನಂತಿಸಬಹುದು, ಯಶಸ್ವಿ ಪಾವತಿಯ ನಂತರ T+1 ರೊಳಗೆ ಲಭ್ಯವಾಗುತ್ತದೆ. ಗ್ರಾಹಕರು ಅದೇ ಪಾವತಿ ಪ್ರಕ್ರಿಯೆ ಮತ್ತು ಟೈಮ್ಲೈನ್ ಅನ್ನು ಅನುಸರಿಸಿ ಸ್ಟೇಟ್ಮೆಂಟ್ಗಾಗಿ hfquery@motilaloswal.com ಗೆ ಇಮೇಲ್ ಮಾಡಬಹುದು. |
| 2 | ಸಾಲ ದಾಖಲೆಗಳ ಛಾಯಾಚಿತ್ರ ಪ್ರತಿ | ಪ್ರಮುಖಾಂಶಗಳ ಹೇಳಿಕೆಯಲ್ಲಿ ಉಲ್ಲೇಖಿಸಿದಂತೆ ದಾಖಲೆ ಮರುಪಡೆಯುವಿಕೆ ಶುಲ್ಕಗಳನ್ನು ಪಾವತಿಸುವ ಮೂಲಕ ಸಾಲ ದಾಖಲೆಗಳು ಮತ್ತು ಆಸ್ತಿ ಪತ್ರಗಳ ಛಾಯಾಚಿತ್ರ ಪ್ರತಿಗಳನ್ನು ವಿನಂತಿಯ ಮೇರೆಗೆ ಪಡೆಯಬಹುದು. ವಿನಂತಿಯನ್ನು ಪ್ರಾರಂಭಿಸಲು, ಸಾಲದಾರರು hfquery@motilaloswal.com ಗೆ ಇಮೇಲ್ ಕಳುಹಿಸಬಹುದು ಅಥವಾ 8291889898 ಮೂಲಕ ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡಬಹುದು ಅಥವಾ ಸಮೀಪದ MOHFL ಶಾಖೆಗೆ ಭೇಟಿ ನೀಡಬಹುದು. ಯಶಸ್ವಿ ಪಾವತಿಯ ನಂತರ, ವಿದ್ಯುನ್ಮಾನ ಪ್ರತಿಯನ್ನು ಸಾಲದಾರರ ನೋಂದಾಯಿತ ಇಮೇಲ್ ವಿಳಾಸಕ್ಕೆ ಕಳುಹಿಸಲಾಗುತ್ತದೆ ಅಥವಾ ಭೌತಿಕ ಪ್ರತಿಗಳನ್ನು ಕೊರಿಯರ್ ಅಥವಾ ನೋಂದಾಯಿತ ಪೋಸ್ಟ್ ಮೂಲಕ ನೋಂದಾಯಿತ ಸಂವಹನ ವಿಳಾಸಕ್ಕೆ ಕಳುಹಿಸಲಾಗುತ್ತದೆ. ಸಾಲದಾರರು ತಮ್ಮ ವಿನಂತಿಯಲ್ಲಿ ಈ ಆದ್ಯತೆಯನ್ನು ನಿರ್ದಿಷ್ಟಪಡಿಸುವ ಮೂಲಕ ಸಮೀಪದ MOHFL ಶಾಖೆಯಿಂದ ನಕಲು ಪ್ರತಿಗಳನ್ನು ಸಂಗ್ರಹಿಸಲು ಆಯ್ಕೆ ಮಾಡಬಹುದು. |

| | | |
|---|---|---|
| 3 | ಸಾಲದ ಮುಕ್ತಾಯ/ವರ್ಗಾವಣೆಯ ಮೇಲೆ ಮೂಲ ದಾಖಲೆಗಳ ಪೂರ್ವಪಾವತಿ ಮತ್ತು ಹಿಂತಿರುಗಿಸುವಿಕೆ | ಸಾಲ/ಗಳ ಮರುಪಾವತಿ/ಇತ್ಯರ್ಥವಾದಾಗ ಮೂಲ ಹಕ್ಕುಪತ್ರ ದಸ್ತಾವೇಜುಗಳು / ಆಸ್ತಿ ದಾಖಲೆಗಳ ಬಿಡುಗಡೆ<br><br>a) ಸಾಲ ವಿತರಣೆಯ ಸಮಯದಲ್ಲಿ ಪಡೆದ ಎಲ್ಲಾ ಮೂಲ ಆಸ್ತಿ ದಾಖಲೆಗಳನ್ನು ಮತ್ತು ಯಾವುದೇ ವಿತರಣೆಯ ನಂತರದ ದಸ್ತಾವೇಜುಗಳನ್ನು ಸಾಲದ ಖಾತೆಯ ಪೂರ್ಣ ಮರುಪಾವತಿ / ಇತ್ಯರ್ಥದ ನಂತರ 30 ದಿನಗಳ ಅವಧಿಯೊಳಗಾಗಿ MOHFL ಬಿಡುಗಡೆ ಮಾಡತಕ್ಕದ್ದು.<br><br>b) ಸಾಲದ ಖಾತೆಯ ಪೂರ್ಣ ಮರುಪಾವತಿ / ಇತ್ಯರ್ಥದ ನಂತರ 30 ದಿನಗಳ ಅವಧಿಯೊಳಗಾಗಿ ಯಾವುದೇ ರಿಜಿಸ್ಟ್ರಿಯಲ್ಲಿ ನೋಂದಾಯಿಸಲಾದ ಪ್ರಭಾರಗಳನ್ನು MOHFL ತೆಗೆದುಹಾಕತಕ್ಕದ್ದು.<br><br>c) ಸಾಲದ ಖಾತೆಯ ಪೂರ್ಣ ಮರುಪಾವತಿ / ಇತ್ಯರ್ಥದ ನಂತರ ಸಾಲಗಾರನ ಕೋರಿಕೆಯ ವಿಧ ಆಸ್ತಿ ಪತ್ರಗಳನ್ನು ಶಾಖೆ ಅಥವಾ ಇತರ ಯಾವುದೇ ಶಾಖೆಯಿಂದ ಸಂಗ್ರಹಿಸತಕ್ಕದ್ದಾಗಿರುತ್ತದೆ. ಶಾಖೆಯ ವಿಳಾಸವು ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ, ಹಾಗೂ ಪರಿಷ್ಕೃತ / ನೂತನ / ಸಮೀಪದ ಶಾಖೆಯ ವಿಳಾಸವನ್ನು MOHFL ಜಾಲತಾಣ www.motilaloswalhf.com ನಲ್ಲಿ, ನಮ್ಮನ್ನು ಸಂಪರ್ಕಿಸಿ ವಿಭಾಗದಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.<br><br>d) ಮೂಲ ಆಸ್ತಿ ದಾಖಲೆಗಳನ್ನು ಬಿಡುಗಡೆ ಮಾಡುವಲ್ಲಿ ವಿಳಂಬವಾದರೆ ಅಥವಾ ಸಾಲದ ಪೂರ್ಣ ಮರುಪಾವತಿ / ಇತ್ಯರ್ಥದ ನಂತರ 30 ದಿನಗಳನ್ನು ಮೀರಿಯೂ ಸಂಬಂಧಿತ ರಿಜಿಸ್ಟ್ರಿಯಲ್ಲಿ ಪ್ರಭಾರ ತೃಪ್ತಿ ನಮೂನೆಯನ್ನು ಸಲ್ಲಿಸಲು ವಿಫಲವಾದರೆ, ಅಂತಹ ವಿಳಂಬಕ್ಕೆ ಕಾರಣಗಳನ್ನು MOHFL ಸಾಲಗಾರನಿಗೆ ತಿಳಿಸುತ್ತದೆ. ಅಂತಹ ವಿಳಂಬಕ್ಕೆ MOHFL ಕಾರಣವಾಗಿರುವ ಪ್ರಕರಣದಲ್ಲಿ, ಸಾಲಗಾರನಿಗೆ ಪ್ರತಿ ದಿನದ ವಿಳಂಬಕ್ಕೆ ರೂ.5,000/- ದರದಲ್ಲಿ ಪರಿಹಾರ ನೀಡಲಾಗುವುದು. ಇದನ್ನು MOHFL ಸಾಲಗಾರನಿಗೆ ಆಕೆಯ / ಆತನ ಸಾಲ ಸೇವಾ ಮರುಪಾವತಿ ಖಾತೆಯಲ್ಲಿ ಪಾವತಿಸತಕ್ಕದ್ದು.<br><br>e) ಮೂಲ ಆಸ್ತಿ ದಾಖಲೆಗಳಿಗೆ ಭಾಗಶಃ ಅಥವಾ ಪೂರ್ಣವಾಗಿ ನಷ್ಟ / ಹಾನಿಯಾದ ಸಂದರ್ಭದಲ್ಲಿ, MOHFL ಸಾಲಗಾರನಿಗೆ ಆಸ್ತಿ ದಾಖಲೆಗಳ ನಕಲುಪ್ರತಿಯನ್ನು / ಪ್ರಮಾಣೀಕೃತ ಪ್ರತಿಗಳನ್ನು ಪಡೆಯಲು ಸಹಾಯ ಮಾಡತಕ್ಕದ್ದು ಮತ್ತು ಅದಕ್ಕೆ ಸಂಬಂಧಿತವಾದ ವೆಚ್ಚಗಳನ್ನು, ಮೇಲಿನ ಪ್ಯಾರಾ d) ಯಲ್ಲಿ ಸೂಚಿಸಿದಂತೆ ಪರಿಹಾರವನ್ನು ಪಾವತಿಸುವುದರ ಜೊತೆಗೆ, ಭರಿಸತಕ್ಕದ್ದು. ಆದಾಗ್ಯೂ, ಅಂತಹ ಸಂದರ್ಭದಲ್ಲಿ MOHFL ಈ ಕಾರ್ಯವಿಧಾನವನ್ನು ಪೂರ್ಣಗೊಳಿಸಲು 30 ದಿನಗಳ ಹೆಚ್ಚುವರಿ ಸಮಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ವಿಳಂಬವಾದ ಅವಧಿಯ ದಂಡವನ್ನು ಆನಂತರ ಲೆಕ್ಕಹಾಕಲಾಗುವುದು (ಎಂದರೆ ಒಟ್ಟು 60 ದಿನಗಳ ಅವಧಿಯ ನಂತರ). |

| | | |
|---|---|---|
| 3 | ಸಾಲದ ಮುಕ್ತಾಯ/ ವರ್ಗಾವಣೆಯ ಮೇಲೆ ಮೂಲ ದಾಖಲೆಗಳ ಪೂರ್ವಪಾವತಿ ಮತ್ತು ಹಿಂತಿರುಗಿಸುವಿಕೆ | f)ಆಸ್ತಿ ಮಾಲೀಕ / ಸಾಲಗಾರನ (ಜಂಟಿ ಸಾಲಗಾರರ ಸಂದರ್ಭದಲ್ಲಿ) ಮರಣದ ದುರದೃಷ್ಟಕರ ಸಂದರ್ಭದಲ್ಲಿ, ಆಸ್ತಿ ದಸ್ತಾವೇಜುಗಳನ್ನು ಯಾರಾದರೂ ಒಬ್ಬ ಅಥವಾ ಯಾವುದೇ ಸಹ-ಸಾಲಗಾರರಿಗೆ ವ್ಯಕ್ತಿಗತವಾಗಿ, ಅಥವಾ, ಅದನ್ನು ಸಂಗ್ರಹಿಸಲು ಆ ವ್ಯಕ್ತಿಗೆ/ಗಳಿಗೆ ಅಧಿಕಾರ ನೀಡುವಂತಹ ಸಿಂಧುವಾದ ಅಧಿಕಾರ ಪತ್ರ / POA ಸಲ್ಲಿಕೆಯ ಮೂಲಕ ಬಿಡುಗಡೆ ಮಾಡಲಾಗುವುದು. ಏಕಮಾತ್ರ ಸಾಲಗಾರ ಮತ್ತು / ಅಥವಾ ಎಲ್ಲಾ ಸಾಲಗಾರ ಮತ್ತು ಸಹ-ಸಾಲಗಾರರು ದುರದೃಷ್ಟವಶಾತ್ ಮರಣಿಸಿದ ಸಂದರ್ಭದಲ್ಲಿ ಆಸ್ತಿ ದಾಖಲೆಗಳನ್ನು ಮೃತ ಆಸ್ತಿ ಮಾಲೀಕರ ಕಾನೂನುಬದ್ಧ ವಾರಸುದಾರರಿಗೆ ಅಥವಾ ಕಾನೂನುಬದ್ಧ ವಾರಸುದಾರರಿಂದ ಅಧಿಕಾರ ಪಡೆದ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು. ಕಾನೂನುಬದ್ಧ ಉತ್ತರಾಧಿಕಾರಿ(ಗಳು) ತಮ್ಮ ಉತ್ತರಾಧಿಕಾರಿತ್ವಕ್ಕೆ ಕಾನೂನಿನ ಅಡಿಯಲ್ಲಿ ಅನ್ವಯವಾಗುವ ಸೂಕ್ತವಾದ ಮತ್ತು ಸಿಂಧುವಾದ ದಾಖಲೆಗಳು / ಪುರಾವೆಗಳನ್ನು MOHFLಗೆ ಅಗತ್ಯವಾದಂತೆ / ಪ್ರಕ್ರಿಯೆಗೆ ಅಗತ್ಯವಾದಂತೆ ಒದಗಿಸಬೇಕು. |

ಸಾಲದ ವಿವರವಾದ ಷರತ್ತುಗಳು ಮತ್ತು ನಿಬಂಧನೆಗಳಿಗಾಗಿ, ಇದರ ಪಕ್ಷಕಾರರು ಅವರು ಕಾರ್ಯಗತಗೊಳಿಸಿದ/ ಕಾರ್ಯಗತಗೊಳಿಸಲಿರುವ ಸಾಲ ಮತ್ತು ಇತರ ಭದ್ರತಾ ದಾಖಲೆಗಳನ್ನು ಓದತಕ್ಕದ್ದು ಮತ್ತು ಅವಲಂಬಿಸತಕ್ಕದ್ದು ಎಂದು ಈ ಮೂಲಕ ಅಂಗೀಕರಿಸಲಾಗಿದೆ.

ಈ ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳನ್ನು ಸಾಲಗಾರನು(ರು) ಓದಿದ್ದಾರೆ / MOHFLಯ ಶ್ರೀ/ಶ್ರೀಮತಿ ಅವರು ಸಾಲಗಾರನಿಗೆ(ರಿಗೆ) ಓದಿ ಹೇಳಿದ್ದಾರೆ ಮತ್ತು ಸಾಲಗಾರನು(ರು) ಅವುಗಳನ್ನು ಅರ್ಥಮಾಡಿಕೊಂಡಿದ್ದಾನೆ(ರೆ).

ದಿನಾಂಕ: ಅಧಿಕೃತ ಸಹಿ:

ಸ್ಥಳ: Mumbai ಕಾರ್ಯಾಚರಣೆ ಮುಖ್ಯಸ್ಥ